# ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 228/2018 ಸಿ.ಡಬ್ಲ್ಯೂ –14 ಪಿ.ಡಬ್ಲ್ಯೂ -12

| | | |
|---|---|---|
| ಹೆಸರು | ಃ | ಮಾಣಿಕ |
| ತಂದೆಃ ಗಂಡ | ಃ | ಗುರುಶಾಂತ |
| ವಯಸ್ಸು | ಃ | ೩೨ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಕೊರಳ್ಳಿ |

ದಿನಾಂಕಃ೨೦.೦೩.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

## ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ

ಆರೋಪಿ ಪರಿಚಯ ಇರುತ್ತದೆ. ಚಾಸಾ-1 ರಿಂದ 13, ಮತ್ತು 15 ರವರ ಪರಿಚಯ ಇರುತ್ತದೆ. ಸದರಿ ದಿನದಂದು ನಾನು ಊರಲ್ಲಿ ಇದ್ದಾಗ ಶಾಂತಪ್ಪ ಅನ್ನುವವರು ಕರೆ ಮಾಡಿ ನಿಮ್ಮ ಸಂಬಂಧಕರಿಗೆ ಅಪಘಾತವಾಗಿದೆ ಎಂದು ಹೇಳಿದರು, ನಂತರ ನಾನು ಅಪಘಾತವಾದ ಸ್ಥಳಕ್ಕೆ ಹೋಗಿ ಚಾಸಾ-೧ ರವರನ್ನು ಜೀಪಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಸದರಿ ಅಪಘಾತದಿಂದ ಚಾಸಾ-೧ ರವರಿಗೆ ತಲೆಗೆ ತೀವ್ರ ಸ್ವರೂಪದ ಗಾಯವಾಗಿತ್ತು, ಕೈ ಕಟ್ ಆಗಿತ್ತು, ಎಡಗಾಲು ಮುರಿದಿತ್ತು, ಚಾಸಾ-6 ರವರಿಗೆ ತಲೆಗೆ ಮತ್ತು ಕೈ ಮುರಿದಿರುತ್ತು, ತೀವ್ರ ಸ್ವರೂಪದ ಗಾಯಗಳಾಗಿದ್ದವು. ಇಬ್ಬರನ್ನು ಗುಲಬರ್ಗಾದ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿದೆವು. ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ-೧ ರವರನ್ನು ಬಾಬುರಾವ ಆಸ್ಪತ್ರೆಗೆ ದಾಖಲಿಸಿದೆವು. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು, ಬೆಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಿಸದ ಕಾರಣ ಚಾಸಾ-೧ ರವರು ತೀರಿಕೊಂಡಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

## ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.

ಚಾಸಾ-೧ ರವರಿಗೆ ನಾನು ಹೋಗಿ ಆಸ್ಪತ್ರೆಗೆ ದಾಖಲು ಮಾಡುವ ಸಮಯದಲ್ಲಿ ಕೇಳಿದಾಗ ಅವರು ತಾನು ಚಾಸಾ-೬ ರವರು ಭುಸನೂರ ಗ್ರಾಮಕ್ಕೆ ಚಿಕಿತ್ಸೆ ಪಡೆದುಕೊಳ್ಳಲು ತಮ್ಮ ಮೋಟರ್ ಸೈಕಲ ನಂ. ಕೆ.ಎ.32-ಇ.ಎಲ್-0534 ರ ಮೇಲೆ ಹೊರಟಾಗ ಅಪಘಾತವಾಗಿರುತ್ತದೆ ಎಂದು ಹೇಳಿರುತ್ತಾರೆ ಎಂಧರೆ ಸರಿ. ಸದರಿ ಘಟನೆ ಸಾಯಂಕಾಲ ಸಮಯ 6.00 ಗಂಟೆಗೆ ಜೀಪ್ ನಂ. ಎಂ.ಹೆಚ್. 12-ಬಿಜಿ-7085 ರ ಚಾಲಕನು ಅತಿ ಜೋರಾಗಿ ಮತ್ತು ನಿರ್ಲಕ್ಷತನದಿಂದ ಓಡಿಸಿಕೊಂಡು ಅಪಘಾತವನ್ನು ಅಮರ್ಜಾ ಬ್ರಿಡ್ಜ ಬಳಿ ಪಡಿಸಿರುತ್ತಾನೆ ಎಂದು ಹೇಳಿರುತ್ತಾರೆ ಎಂಧರೆ ಸರಿ. ನಾನು ಈ ರೀತಿಯಾಗಿ ಪೋಲಿಸರಿಗೆ ಭೂಸನೂರ ಗ್ರಾಮದ ಸೀಮಾಂತರದಲ್ಲಿ ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ.

**ಪಾಟೀ ಸವಾಲು ಆರೋಪಿ ಪ**ರ ಶ್ರೀ ಎಸ್.ಓ.ಎಂ. **ವಕೀಲರಿಂದ**

ಶಾಂತಪ್ಪ ಕರೆ ಮಾಡಿದರು ಎಂದು ಹೇಳುತ್ತಿರಲ್ಲ, ಸದರಿ ಶಾಂತಪ್ಪ ಯಾವ ನಂಬರನಿಂದ ನಿಮಗೆ ಕರೆ ಮಾಡಿದನು ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ನಂಬರ್ ಯಾರದು ಎಂದು ನಿಮಗೆ ಹೇಳಲು ಬರುತ್ತದೆಯಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನನಗೆ 6.00 ರಿಂದ 6.30 ಗಂಟೆ ಒಳಗಾಗಿ ಕರೆ ಬಂದಿರುತ್ತದೆ. ನಾನು 2-3 ಜನ ಹುಡುಗರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಯಾವ ಜೀಪ್ ತೆಗೆದುಕೊಂಡು ಹೋದಿರಿ ಅದರ ಮಾಲಿಕ ಯಾರು ಯಾವ ನಂಬರ್ ಏನು ಎಂದು ನಿಮಗೆ ಹೇಳಲು ಬರುತ್ತದೆಯಾ ಎಂಧರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಘಟನೆಯನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಘಟನೆ ಹೇಗಾಯಿತು ಯಾರು ಪಡಿಸಿದರು ಎಂದು ನನಗೆ ಹೇಳಲು ಬರುವುದಿಲ್ಲ, ಸದರಿ ಜೀಪ್ ಚಾಲಕ ಯಾರು ಎಂದು ನನಗೆ ಹೇಳಲು ಬರುವುದಿಲ್ಲ. ಅಲ್ಲಿ ಸಾಕಷ್ಟು ಜನ ಓಡಾಡಿದ್ದಾರೆ ಅವರು ಯಾರು ಎಂದು ಹೇಳಲು ಬರುವುದಿಲ್ಲ, ಆದರೆ ಅಲ್ಲಿ ಸಾಕಷ್ಟು ಜನ ಕೂಡಿದ್ದರು. ಸದರಿ ಅಪಘಾತ ಪಡಿಸಿದ ಜೀಪನ ಸಂಖ್ಯೆ ಹೇಳಲು ಬರುತ್ತದೆಯಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ದಿನದಂದು ನೀವು ಸ್ಥಳಕ್ಕೆ ಹೋದಾಗ ಅಲ್ಲಿ ಯಾವ ವಾಹನ ಯಾವ ದಿಕ್ಕಿಗೆ ಬಿದ್ದಿತ್ತು ಎಂದರೆ ಸಾಕ್ಷಿ ಜೀಪ್ ಪೂರ್ವ ದಿಕ್ಕಿಗೆ ಬಿದ್ದಿತ್ತು, ದಕ್ಷಿಣ ದಿಕ್ಕಿಗೆ ಮೋಟರ್ ಸೈಕಲ ಬಿದ್ದುತ್ತು. ಸದರಿ ಜೀಪನ ಚಾಲಕನಿಗೆ ಗಾಯವಾಗಿತ್ತಾ ಎಂದರೆ ಸಾಕ್ಷಿ ಅಲ್ಲಿ ಚಾಲಕನೇ ಇರಲಿಲ್ಲ ಎಂದು ನುಡಿಯುತ್ತಾರೆ.

ನಾನು ಈ ಮೊದಲು ಯಾರ ಮುಂದೆಯೂ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿ, ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿ. ಅಪಘಾತ ಯಾರ ತಪ್ಪಿನಿಂದ ಆಯಿತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ 7.00 ಗಂಟೆ ಒಳಗಾಗಿ ಹೋಗಿರುತ್ತೇನೆ, ಆಸ್ಪತ್ರೆಗೆ 7.30 ಗಂಟೆಗೆ ಹೋಗಿರುತ್ತೇನೆ.

ಸದರಿ ದಿನದಂದು ನಾನು ಊರಲ್ಲಿ ಇದ್ದಾಗ ಶಾಂತಪ್ಪ ಅನ್ನುವವರು ಕರೆ ಮಾಡಿ ನಿಮ್ಮ ಸಂಬಂಧಕರಿಗೆ ಅಪಘಾತವಾಗಿದೆ ಎಂದು ಹೇಳಿದರು, ನಂತರ ನಾನು ಅಪಘಾತವಾದ ಸ್ಥಳಕ್ಕೆ ಹೋಗಿ ಚಾಸಾ-೧ ರವರನ್ನು ಜೀಪಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಆಪಘಾತದಿಂದ ಚಾಸಾ-೧ ರವರಿಗೆ ತಲೆಗೆ ತೀವ್ರ ಸ್ವರೂಪದ ಗಾಯವಾಗಿತ್ತು, ಕೈ ಕಟ್ ಆಗಿತ್ತು, ಎಡಗಾಲು ಮುರಿದಿತ್ತು, ಚಾಸಾ-6 ರವರಿಗೆ ತಲೆಗೆ ಮತ್ತು ಕೈ ಮುರಿದಿರುತ್ತು, ತೀವ್ರ ಸ್ವರೂಪದ ಗಾಯಗಳಾಗಿದ್ದವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಇಬ್ಬರನ್ನು ಗುಲಬರ್ಗಾದ ಬಸವೇಶ್ವರ ಆಸ್ಪತ್ರೆಗೆ ದಾಖಲಿಸಿದೆವು, ಹೆಚ್ಚಿನ ಚಿಕಿತ್ಸೆಗಾಗಿ ಚಾಸಾ-೧ ರವರನ್ನು ಬಾಬುರಾವ ಆಸ್ಪತ್ರೆಗೆ ದಾಖಲಿಸಿದೆವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ, ಚಾಸಾ-೧ ರವರಿಗೆ ನಾನು ಹೋಗಿ ಆಸ್ಪತ್ರೆಗೆ ದಾಖಲು ಮಾಡುವ ಸಮಯದಲ್ಲಿ ಕೇಳಿದಾಗ ಅವರು ತಾನು ಚಾಸಾ-೬ ರವರು ಭುಸನೂರ ಗ್ರಾಮಕ್ಕೆ ಚಿಕಿತ್ಸೆ ಪಡೆದುಕೊಳ್ಳಲು ತಮ್ಮ ಮೋಟರ್ ಸೈಕಲ ನಂ. ಕೆ.ಎ.32-ಇ.ಎಲ್-0534 ರ ಮೇಲೆ ಹೊರಟಾಗ ಅಪಘಾತವಾಗಿರುತ್ತದೆ ಎಂದು ಹೇಳಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಘಟನೆ ಸಾಯಂಕಾಲ ಸಮಯ 6.00 ಗಂಟೆಗೆ ಜೀಪ್ ನಂ.

ಎಂ.ಹೆಚ್. 12-ಬಿಜಿ-7085ರ ಚಾಲಕನು ಅತಿ ಜೋರಾಗಿ ಮತ್ತು ನಿರ್ಲಕ್ಷತನದಿಂದ ಓಡಿಸಿಕೊಂಡು ಅಪಘಾತವನ್ನು ಅಮರ್ಜಾ ಬ್ರಿಡ್ಜ ಬಳಿ ಪಡಿಸಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ